ಚಿಕ್ಕವರಿದ್ದಾಗ ನಮಗೆಲ್ಲ ಡಾಕ್ಟರುಗಳೆಂದರೆ ಒಂದು ತೆರನಾದ ಭೀತಿ. (ಈಗಲೂ ಹೋಗಿಲ್ಲ ಬಿಡಿ. ಅವರ ಬಿಲ್ಲುಗಳನ್ನು ನೆನೆಸಿಕೊಂಡು ರಾತ್ರಿ ನಿದ್ದೆಯಲ್ಲಿಯೂ ಹೌಹಾರುವುದಿದೆ) ಅಪರೂಪಕ್ಕೊಮ್ಮೆ ಮನೆಗೆ ಬರುವ ಅವರನ್ನು ಕರೆತರಲು ಹೋದ ಮನುಷ್ಯನೇ ಕಡ್ಡಾಯವಾಗಿ ಹೊತ್ತು ತರಬೇಕಿದ್ದ ಅವರ ವಿಶಿಷ್ಟ ಚೀಲ, ಅಷ್ಟೇ ವಿಶಿಷ್ಟವಾಗಿ ಅದನ್ನು ತೆರೆಯುವ ಅವರ ಚಾಕಚಕ್ಯತೆ, ಆ ಚೀಲದೊಳಗಿರುತ್ತಿದ್ದ ಆ ಚಿತ್ರ ವಿಚಿತ್ರ ಬಣ್ಣದ ಮಾತ್ರೆ ಬಾಕ್ಸುಗಳು ಪ್ರತಿಯೊಂದೂ ಆಶ್ಚರ್ಯವೇ ನಮಗೆ.

ಮನೆಗೆ ಬಂದವರೇ ಕಾಯಿಲೆ ಮಲಗಿದವರ ಕಡೆಗೆ ಕಣ್ಣೆತ್ತಿಯೂ ನೋಡದೆ ಅವರ ಆಜ್ಞೆಗಾಗಿಯೇ ಕಾದು ನಿಂತಿರುತ್ತಿದ್ದ ಮನೆಯಲ್ಲಿನ ಹೆಂಗಸರಿಗೆ 'ಕಾಯಿಸಿದ ನೀರು ತನ್ನಿ' ಎಂದು ದರ್ಪದಿಂದ ಹೇಳಿ ಆ ಮೇಲೆಯೇ ಪೇಷಂಟಿನ ಕಡೆಗೆ ದೃಷ್ಟಿ ಹರಿಸುತ್ತಿದ್ದುದು. ತಮ್ಮ ಬ್ಯಾಗಿನೊಳಗಿಂದ ಡಬ್ಬವೊಂದನ್ನು ತೆಗೆದು ಅದರೊಳಗಿನಿಂದ ದಬ್ಬಳದಂತಹ ಸೂಜಿಯನ್ನು ಹೊಂದಿದ್ದ ಸಿರಿಂಜನ್ನು ಝಳಪಿಸುತ್ತಾ ಅಷ್ಟರಲ್ಲಿ ವಿನೀತರಾಗಿ ಹೆಂಗಸರು ತಂದಿಡುತ್ತಿದ್ದ ಬಿಸಿ ನೀರಿನಲ್ಲಿ ಅದನ್ನು ಅದ್ದಿ ಪಿಚಕಾರಿಯಂತೆ ಆ ನೀರನ್ನು ಹಾರಿಸುತ್ತ ನಮ್ಮಲ್ಲಿ ಆಶ್ಚರ್ಯ ಹುಟ್ಟಿಸುತ್ತಿದ್ದುದು. ಅದೇ ಸಿರಿಂಜಿನಲ್ಲಿ ಚೀಲದಲ್ಲಿದ್ದ ಬಣ್ಣ ಬಣ್ಣದ ಬಾಟ್ಲಿಗಳಲ್ಲಿ ಒಂದರ ಔಷಧವನ್ನು ಹೀರುತ್ತ 'ಅಯ್ಯೋ ಅಮ್ಮಾ' ಎಂದು ನರಳುತ್ತ ಮಲಗಿದ್ದವರಿಗೆ ಚುಚ್ಚಿ ಆ ನೋವಿಗೆ ಇನ್ನೇನು ಸ್ವರ್ಗಕ್ಕೇ ಹೋಗುತ್ತಿದ್ದೇನೋ ಎನ್ನುವಂತೆ ಕಿರಿಚಿದರೆ 'ಏನೂ ಹೆದರಬೇಡ... ಮೇಲ್ಗಡೆ ಇನ್ನೂ ಜಾಗ ಖಾಲಿ ಆಗಿಲ್ಲವಂತೆ' ಎನ್ನುತ್ತ ಅವರನ್ನು ಗದರಿಸಿ ಮುಂದೇನು ಪಥ್ಯ ಮಾಡಬೇಕೆಂದು ಠೀವಿಯಿಂದ ಮನೆಯ ಹೆಂಗಸರನ್ನು ಮತ್ತು ಕಾಯಿಲೆಯವರನ್ನು ಇಬ್ಬರನ್ನೂ ಸೇರಿಸಿ ಹೇಳುತ್ತ ಹೊರಡುವವರು. ಹಾಗೆಯೇ 'ಇವನ ಹತ್ತಿರ ಮಾತ್ರೆಗಳನ್ನು ಕೊಟ್ಟು ಕಳುಹಿಸುತ್ತೇನೆ. ತಪ್ಪದೇ ಕೊಡಬೇಕು. ಎರಡು ದಿನ ಬಿಟ್ಟು ಮತ್ತೆ ಬೇಕಾದರೆ ಇನ್ನೊಂದು ಸೂಜಿ ಚುಚ್ಚುವ...' ಹೋಗುತ್ತ ಅವರೆಡೆಗೇ ಬಿರುಗಣ್ಣು ಬಿಟ್ಟು ನೋಡುತ್ತಿದ್ದ ನಮ್ಮೆಡೆಗೆ ತಿರುಗಿ ಹೂಂಕರಿಸುತ್ತ 'ನಿನಗೂ ಒಂದು ಸೂಜಿ ಚುಚ್ಚುವಾ ಹೇಗೆ...' ಎಂದು ಮೊದಲೇ ಹೆದರಿದ ನಮ್ಮ ಮೇಲೆ ಹಾವು ಎಸೆಯುತ್ತ ಹೋಗುವ ಆ ಸ್ಟೈಲು. (ಇಂದಿನ ಮೈಕ್ರೋ ನೀಡ್ಲ್‌ಗಳ ಕಾಲದಲ್ಲೂ ಡಾಕ್ಟರ ಕೈಯ್ಯಲ್ಲಿ ಸೂಜಿ ನೋಡಿದರೆ ಆ ನಡುಕ ಇನ್ನೂ ಬರುತ್ತದೆ.) ಇಷ್ಟೆಲ್ಲ ಮಾಡಿದರೂ ಆ ಕಾಲದಲ್ಲಿ ಬಂದು ಹೋಗುವ ಚಾರ್ಜೂ ಸೇರಿದಂತೆ ಅವರು ತೆಗೆದುಕೊಳ್ಳುತ್ತಿದ್ದ ಹಣ ಐದು ರೂಪಾಯಿ ಮಾತ್ರ.



ನಮ್ಮೂರಿನಲ್ಲಿ ಆಗ ಒಬ್ಬರೇ ಡಾಕ್ಟರಿದ್ದರು. ಎಂಬಿಬಿಎಸ್ ಮಾಡಿದ ಡಾಕ್ಟರುಗಳು ನಮ್ಮ ಊರಿನ